**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

ಓ.ಎಸ್.4/2019

ಸಾಕ್ಷಿಯನ್ನು ದಿಃ **30.10.2025** ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ವಾದಿ ಪರಃಶ್ರೀ.** NSG **ವಕೀಲರಿಂದ**:

ವಾದಿ ನಮ್ಮನ್ನು ಭೇಟಿಯಾಗಿ ಉಳಿಕೆ ಕ್ರಯದ ಪ್ರತಿಫಲವನ್ನು ಪಡೆದುಕೊಂಡು ಕ್ರಯ ಪತ್ರ ಬರೆದುಕೊಡುವಂತೆ ಕೇಳಿಕೊಂಡರು ಎಂದರೆ ಸರಿಯಲ್ಲ. ನಾನು ಜಮೀನು ದುರಸ್ತು ಆಗಿಲ್ಲ, ಸ್ಕೇಚ್ ತಯಾರಿಸಿ ನಂತರ ಕ್ರಯ ಪತ್ರ ಬರೆದುಕೊಡುವುದಾಗಿ ನಾನು ಹೇಳಿದೆ ಎಂದರೆ ಸರಿಯಲ್ಲ. ವಾದಿ ನನಗೆ ವಕೀಲರ ಮೂಲಕ ನೋಟೀಸ್ ಕಳುಹಿಸಿದರು ಎಂದರೆ ಕಳುಹಿಸಿರಬಹುದು ನನಗೆ ಗೊತ್ತಿಲ್ಲ. ನೋಟೀಸನ್ನು ಯಾರು ಸ್ವೀಕರಿಸಿದ್ದಾರೆ ಎಂದರೆ ಗೊತ್ತಿಲ್ಲ. ಉತ್ತರದ ನೋಟಿಸನ್ನು ಯಾರು ಕೊಡಿಸಿದರು ಎಂದರೆ ಗೊತ್ತಿಲ್ಲ. ನಾನು ನನ್ನ ಪರವಾಗಿ ಮಾತ್ರ ಸಾಕ್ಷಿ ನುಡಿಯುತ್ತಿದ್ದೇನೆ. ದಿಃ 14.11.2018 ರಂದು ನಿಪಿ–14 ರ ಪ್ರಕಾರ ನಮ್ಮ ವಕೀಲರ ಮೂಲಕ ಉತ್ತರದ ನೋಟಿಸನ್ನು ಕೊಡಿಸಿದ್ದೇನೆ ಎಂದರೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ಒಕ್ಕಣೆಗಳನ್ನು ನಾನು ತಿಳಿದುಕೊಂಡಿಲ್ಲ. ನಿಪಿ–14 ರ ಉತ್ತರದ ನೋಟಿಸಿನಲ್ಲಿ ದಿಃ 07.12.2012 ರಂದು ನೋಟೀಸ್ ಷೆಡ್ಯೂಲ್ ನಲ್ಲಿ ವಿವರಿಸಿದ ಸ್ವತ್ತನ್ನು ನಿಮಗೆ ಕ್ರಯಕ್ಕೆ ನೀಡಿಲು ಒಪ್ಪಿ ನೋಂದಾಯಿತ ಕ್ರಯದ ಪತ್ರವನ್ನು ಬರೆಸಿಕೊಟ್ಟಿರುವುದು ನಿಜವೆಂತಲೂ ಸದರಿ ಸ್ವತ್ತಿನ ಕ್ರಯದ ಪ್ರತಿಫಲ ರೂ.13,48,750/– ಮತ್ತು ಮುಂಗಡ ಹಣ ರೂ. 5 ಲಕ್ಷ ಮತ್ತು 3 ವರ್ಷ ಅವಧಿಯು ನಿಶ್ಕರ್ಷೆಯಾಗಿತ್ತೆಂತಲೂ ಹೇಳಿರುವುದು ಸರಿ ಎಂತಲೂ ನಾನು ಬರೆಸಿದ್ದೇನೆ ಎಂದರೆ ಆ ರೀತಿ ಬರೆಸಿಲ್ಲ. ಸಾಕ್ಷಿ ಮುಂದುವರಿದು ಆ ರೀತಿ ಬರೆದಿರುವುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ವಾದಿ ನಿಪಿ–5ರಂತೆ ನೋಟಿಸನ್ನು ನೀಡಿ ಉಳಿಕೆ ಕ್ರಯದ ಪ್ರತಿಫಲ ರೂ.8,48,750/–ನ್ನು ನೀಡಲು ತಯಾರಿರುವುದಾಗಿ ಬಂದು ಕ್ರಯ ಪತ್ರ ಬರೆದುಕೊಡುವಂತೆ ನಮಗೆ ತಿಳಿಸಿದ್ದಾರೆ ಎಂದರೆ ಗೊತ್ತಿಲ್ಲ. ನಿಪಿ–5ರ ನೋಟೀಸ್ ಮತ್ತು ನಿಪಿ–14ರ ಉತ್ತರದ ನೋಟಿಸ್ ನ ಬಗ್ಗೆ ನನಗೆ ಖುದ್ದಾಗಿ ಸಂಪಿಪೂರ್ಣ ಮಾಹಿತಿ ಇದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಕ್ರಯ

ಪತ್ರ ಬರೆದುಕೊಡಬೇಕು ಎಂಬ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿಪಿ–11 ರಿಂದ 13ರ ಅಂಚೇ ಸ್ವೀಕೃತಿ ಪತ್ರಗಳಲ್ಲಿ ಇರುವ ಸಹಿ ತನ್ನ ಪತ್ನಿ 2ನೇ ಪ್ರತಿವಾದಿಯದ್ದು ಎಂದು ಗುರುತಿಸುತ್ತಾರೆ. ಸದರಿ ಸಹಿಗಳನ್ನು ನಿಪಿ–11(ಎ) ಯಿಂದ 13(ಎ) ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವ್ಯವಹಾರಗಳ ಬಗ್ಗೆ ಸಂಪೂರ್ಣ ಅರಿವಿದ್ದರೂ ಸಹ ಬಾಧ್ಯಸ್ಥಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಈಗಲೂ ಕೂಡ ಉಳಿಕೆ ಕ್ರಯದ ಪ್ರತಿಫಲ ಕೊಟ್ಟು ಕ್ರಯ ಪತ್ರ ಬರೆಸಿಕೊಳ್ಳಲು ತಯಾರಿದ್ದಾರೆ ಎಂದರೆ ಸರಿಯಲ್ಲ.

ನನ್ನ ಪ್ರತಿವಾದ ಪತ್ರದಲ್ಲಿ ಏನು ವಿಷಯ ಬರೆಯಲಾಗಿದೆ ಎಂದು ಗೊತ್ತಿಲ್ಲ. ಪ್ರತಿವಾದ ಪತ್ರವನ್ನು ಯಾರು ಬರೆದರು ಎಂದು ಗೊತ್ತಿಲ್ಲ. ಪ್ರತಿವಾದ ಪತ್ರಕ್ಕೆ ನಾನಾಗಲೀ ಉಳಿದ ಪ್ರತಿವಾದಿಯರಾಗಲೀ ಮಾಹಿತಿ ಕೊಟ್ಟಿಲ್ಲ. ವಾದಿಗೆ ಕ್ರಯ ಪತ್ರ ಬರೆದುಕೊಡಬೇಕಾಗುತ್ತದೆ ಎಂದು ಅವರಿಗೆ ಮೋಸ ಮಾಡುವ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಉಳಿಕೆ ಕ್ರಯದ ಪ್ರತಿಫಲವನ್ನು ಹೊಂದಿಸಿ ಅನೇಕ ಬಾರಿ ಸಾಕ್ಷಿದಾರರಾದ ಮಹದೇವರವರೊಂದಿಗೆ ನಮ್ಮನ್ನು ಭೇಟಿಯಾಗಿ ಕ್ರಯ ಪತ್ರ ಬರೆದುಕೊಡುವಂತೆ ಕೇಳಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಹಣಿ ಎಂ.ಆರ್ ಮತ್ತು ಉಳಿದ ಕಂದಾಯ ದಾಖಲೆಗಳು ನನ್ನ ಹೆಸರಿನಲ್ಲಿದೆ ಎಂದರೆ ಸರಿ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.